[Govt. of Karnataka C.R.P. 67]

| |
|---|
| **Deposition Sheets (RP.No.57)**<br>**Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 223-2017**

**ಪಿ.ಡಬ್ಲ್ಯು : 7 ಸಿ.ಡಬ್ಲ್ಯು : 5**

| | | |
|---|---|---|
| ಸಾಕ್ಷಿದಾರನ ಹೆಸರು | : | ಕರುಣಾಕರ ಶೆಟ್ಟಿ |
| ತಂದೆಯ ಹೆಸರು | : | ದಿ. ಸಂಜೀವ ಶೆಟ್ಟಿ |
| ಪ್ರಾಯ | : | 53 ವರ್ಷ |
| ಉದ್ಯೋಗ | : | ಚಾಲಕ |
| ವಾಸ | : | ಮುಂಡ್ಕೂರು |

ದಿನಾಂಕ 19.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಸಾಕ್ಷಿಗೆ ವಿ ಸಿ ಮುಖಾಂತರ ಇಬ್ಬರು ವಕೀಲರ ಸಮಕ್ಷಮ ಆರೋಪಿಯನ್ನು ತೋರಿಸಿದ್ದು, ಸಾಕ್ಷಿಯು ಸುಮಾರು ವರ್ಷ ಆಗಿದ್ದರಿಂದ ಆರೋಪಿಯನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ.

2. ಸಾಕ್ಷಿಯು ನಿಪಿ-2 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಚಾಸಾ 2 ರವರ ಮನೆಯ ಹತ್ತಿರ ಪೋಲಿಸರು ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದು, ಸಹಿ ಮಾಡಲು ಹೇಳಿದ ಕಾರಣ ಸಹಿ ಮಾಡಿರುತ್ತೇನೆ. ಚಾಸಾ 2 ರವರ ಮನೆಯಲ್ಲಿ ಕಳ್ಳತನವಾದ ವಿಚಾರವಾಗಿ ಪೋಲಿಸರು ಸ್ಥಳಕ್ಕೆ ಬಂದಿದ್ದರು. ಸದರಿ ಮನೆಯಲ್ಲಿ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಕಳ್ಳತನ ಮಾಡಿದ ವ್ಯಕ್ತಿಯನ್ನು ತೋರಿಸಿರುವುದಿಲ್ಲ. ಗಾಡಿಯಲ್ಲಿ ಕಳ್ಳತನ ಮಾಡಿದ ವ್ಯಕ್ತಿ ಕುಳಿತುಕೊಂಡಿರುತ್ತಾನೆ. ನಾನು ಮಾತ್ರ ಆ ವ್ಯಕ್ತಿಯನ್ನು ನೋಡಿರುವುದಿಲ್ಲ.

3. ಸಾಕ್ಷಿಯು ಆರೋಪಿ ತೋರಿಸಿದ ಸ್ಥಳ ಮಹಜರು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು

ಗುರುತಿಸಲಾಯಿತು. ಸದರಿ ಸಹಿಯನ್ನು ಚಾಸಾ 2 ರವರ ಮನೆಯ ಬಳಿ ಮಾಡಿರುತ್ತೇನೆ. ಪೋಲಿಸರು 7 ಸಹಿಯನ್ನು ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು</u> : <u>ಸಹಾಯಕ ಸರ್ಕಾರಿ ಅಭಿಯೋಜಕರು:-</u>**

4. ದಿ: 05-12-2016 ರಂದು ಪೋಲಿಸರು ಸುರೇಶ್ ಜೋಗಿಯವರ ಮನೆಗೆ ಕಳ್ಳತನವಾದ ವಿಚಾರವಾಗಿ ಬಂದಿದ್ದು, ಸ್ಥಳದಲ್ಲಿ ಪೋಲಿಸರು ನನ್ನ ಮತ್ತು ಚಾಸಾ 4 ರವರ ಸಮಕ್ಷಮ ಚಾಸಾ 1 ರವರ ಮನೆಯಲ್ಲಿ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

5. ದಿ: 11-12-2016 ರಂದು ಪೋಲಿಸರು ವಿಸಿ ಮುಖಾಂತರ ತೋರಿಸಿದ ಆರೋಪಿಯನ್ನು ಕರೆದುಕೊಂಡು ಬಂದಿದ್ದು, ಆರೋಪಿಯು ತಾನು ಕಳುವು ಮಾಡಿರುತ್ತೇನೆಂದು ತೋರಿಸಿದ ಚಾಸಾ 1 ಮತ್ತು 2 ಮತ್ತು ಇತರರ ಮನೆಯಲ್ಲಿ ಪೋಲಿಸರು ನಿಪಿ-11 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 2 ರವರ ಮನೆಗೆ ಪೋಲಿಸರು ಬಂದಿದ್ದು, ಒಟ್ಟು 7 ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಆರೋಪಿಯನ್ನು ನಾನು ನೋಡಿರುವುದಿಲ್ಲ. ಆರೋಪಿಗೆ ಸಹಾಯ ಮಾಡಲು ಆರೋಪಿಯನ್ನು ನೋಡಿದ್ದರೂ ಸಹ ನೋಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು</u>** : ಆರೋಪಿ ಪರ : ಶ್ರೀ ಕೆ ಬಿ ಎಸ್ ವಕೀಲರಿಂದ :

6. ಪೋಲಿಸರು ತಯಾರು ಮಾಡಿದ ದಾಖಲೆಗೆ ಸಹಿ ಮಾಡಲು ಹೇಳಿದ ಕಾರಣ ಚಾಸಾ 2 ರವರ ಮನೆಯ ಬಳಿಗೆ ನಾನು ಹೋಗಿರುತ್ತೇನೆ. ಯಾವ ವಿಚಾರಕ್ಕಾಗಿ ಸದರಿ ದಾಖಲೆಯನ್ನು ತಯಾರಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ದಾಖಲೆಯನ್ನು ನಾನು ಓದಿ ನೋಡಿರುವುದಿಲ್ಲ. ಪೋಲಿಸರು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ